9. ಯಕ್ಷಲಹರಿ ಕಿನ್ನಿಗೋಳ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ರಾಜ್ಯ ಮಟ್ಟದ ತೆಂಕುತಿಟ್ಟಿನ ಹವ್ಯಾಸಿ ಕಲಾವಿದರ ತಾಳ ಮದ್ದಳೆ ಸ್ಪರ್ದೆ ನಡೆಸಲು ಧನ ಸಹಾಯ : 10,000.00

10. ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ಯಕ್ಷಗಾನ ಕಲಾಮಂಡಳಿ ಪರ್ಕಳ, ಉಡುಪಿ ಇವರಿಗೆ ಯಕ್ಷಗಾನ ಚಟುವಟಿಕೆಗಳಿಗೆ ಧನಸಹಾಯ : 20,000.00

11. ಯಕ್ಷಗಾನ ಕೇಂದ್ರ, ಉಡುಪಿ ಇವರಿಗೆ ಯಕ್ಷಗಾನ ಶಿಕ್ಷಣ ತರಬೇತಿ ನಡೆಸಲು ವಿದ್ಯಾರ್ಥಿಗಳ ಶಿಷ್ಯ ವೇತನ ಮತ್ತು ನಿರ್ವಹಣೆ ಅನುದಾನ : 1,75,248.00

12. ಶ್ರೀ ಶಕ್ತಿ ಯಕ್ಷಗಾನ (ಗೊಂಬೆಯ) ಮಂಡಳಿ ಹಲವಾಗಲು ಹರಪ್ಪನಹಳ್ಳಿ ತಾ: ಇವರಿಗೆ ಅಭ್ಯಾಸ ಮಂದಿರ ಕಟ್ಟಲು ಧನಸಹಾಯ : 50,000.00

13. ಶ್ರೀ ಸಿದ್ದಿವಿನಾಯಕ ಯಕ್ಷಗಾನ ಕಲಾಸಂಘ, ನವಿಲುಗೋಣ, ಉತ್ತರ ಕನ್ನಡ ಜಿಲ್ಲೆ ಇವರಿಗೆ ಯಕ್ಷಗಾನ ವೇಶಭೂಷಣಗಳ ಖರೀದಿಗೆ ಧನಸಹಾಯ : 10,000.00

ಸಂತೇಮಾರನಹಳ್ಳಿ ಕ್ಷೇತ್ರದಲ್ಲಿ ಮೀನುಗಾರರ ಗುಂಪು ಮನೆ ಯೋಜನೆ

2266 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರರ "ಗುಂಪು ಮನೆ" ಯೋಜನೆಯು ರಾಜ್ಯದಲ್ಲಿ ಎಷ್ಟು ಗ್ರಾಮಗಳಿಗೆ ಮಂಜೂರಾಗಿದೆ.

ಆ) ಸಂತೇಮಾರನಹಳ್ಳಿ ಕ್ಷೇತ್ರಕ್ಕೆ ಸೇರಿದ ನಂಜನಗೂಡು ತಾಲ್ಲೂಕು, ಹಳೇಪುರ ಗ್ರಾಮಕ್ಕೆ 'ಗುಂಪು ಮನೆ' ಮಂಜೂರಾಗಿದೆಯೇ? ಹಾಗಿದ್ದಲ್ಲಿ ಅದನ್ನು ಯಾವಾಗ ನಿರ್ಮಿಸಲಾಗುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) 1997-98ನೇ ಸಾಲಿನ ಅಂತ್ಯಕ್ಕೆ 108 ಗ್ರಾಮಗಳಿಗೆ ಮಂಜೂರಾಗಿದೆ.

ಆ) ಮನೆ ಮಂಜೂರಾತಿಗಾಗಿ ಮನವಿ ಪತ್ರಗಳು ಮಾತ್ರ ಬಂದಿದ್ದು, ಅವುಗಳನ್ನು ಪರಿಶೀಲಿಸಿ, ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಮತ್ತು ಇತರೆ ದಾಖಲೆಗಳನ್ನು ಪಡೆದು ಪ್ರಸ್ತಾವನೆಯನ್ನು ಕಳುಹಿಸಿ ಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸಂತೇಮಾರನಹಳ್ಳಿ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಗೆ ಸೇರಿದ ರಸ್ತೆಗಳು.

2267 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮಾರನಹಳ್ಳಿ ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ಉದ್ದದ ಯಾವ ಯಾವ ರಸ್ತೆಗಳು ನಬಾರ್ಡ್ ಯೋಜನೆಗೆ ಸೇರ್ಪಡೆಯಾಗಿವೆ?